Calling Attention to a Matter of urgent Public Importance

Stabbing incident and death of a person over a Tenacy dispute in Peduperars Village, Mangalore Taluk.

ಅಧ್ಯಕ್ಷರು.—ಕಾಲ್‌ಅಟೆನ್‌ಷನ್ ಮೇಲೆ ಬೇಕಾದರೆ ಮಾನ್ಯ ಸದಸ್ಯರು ಪ್ರಶ್ನೆ ಕೇಳಬಹುದು ಅವಕಾಶವನ್ನು ಕೊಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ ಹೊಳೆನರಸೀಪುರ.—ನಾವು ಇದನ್ನು ನಿಲುವಳಿ ಸೂಚನೆಯಾಗಿ ಕಳುಹಿಸಿದ್ದೇವು. Under rules, mere asking of certain clarification on the reply to call Attention Notice is not going to satisty us. This has to be discussed thereadbare.

ಅಧ್ಯಕ್ಷರು.—ತಾವು ನಿಲುವಳಿ ಸೂಚನೆ ಕಳುಹಿಸಿದುದನ್ನು ನಾನು ಕಾಲ್ ಅಟೆನ್‌ಷನ್ ನೋಟಿಸ್ ಆಗಿ ಪರಿವರ್ತನೆ ಮಾಡಿದ್ದೇನೆ. ಆದ್ದರಿಂದ ಈ ಕಾಲ್ ಅಟೆನ್‌ಷನ್ ಮೇಲೆ ತಾವು ಪ್ರಶ್ನೆ ಕೇಳುವುದಾದರೆ ನಾನು ಅವಕಾಶ ಕೊಡುತ್ತೇನೆ ತಾವು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಈ ವಿಷಯವನ್ನು ಹೇಳಬಹುದು. ಇಲ್ಲವೇ ಹೋದರೆ ನಾನು ಇದನ್ನು ತಳ್ಳಿ ಹಾಕಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಇದನ್ನು ತಳ್ಳಿಹಾಕುತ್ತೇವೆ ಎಂದರೆ ಇದಕ್ಕಿಂತ ಗಹನವಾದ ವಿಷಯ ಮತ್ತೊಂದಿಲ್ಲ. I am sorry. Any passing remarks on the Governer's Address will not solve the problem.

ಅಧ್ಯಕ್ಷರು.—ಇದರಲ್ಲಿ ಹೇಗೆ ಸಮಸ್ಯೆ ಬಗೆ ಹರಿಯುತ್ತದೆಯೋ ಅದರಲ್ಲಿಯೂ ಹಾಗೇ ಬಗೆ ಹರಿಯುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಕೊಡಬ ನಿಲುವಳಿ ಸೂಚನೆಯಲ್ಲಿ ಚರ್ಚೆ ಮಾಡುವುದಕ್ಕೂ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಚರ್ಚೆ ಮಾಡುವುದಕ್ಕೂ ವ್ಯತ್ಯಾಸ ಇದೆ.

ಅಧ್ಯಕ್ಷರು.—ಈಗ ಕಾಲ್ ಅಟೆನ್‌ಷನ್ ಮೇಲೆ ಬಂದಿರತಕ್ಕ ಉತ್ತರದ ಮೇಲೆ ಸಾಕಷ್ಟು ಪ್ರಶ್ನೆಯನ್ನು ಕೇಳಬಹುದು.

ಶ್ರೀ ಎಚ್. ಡಿ. ದೇವೇಗೌಡ.—ಅವರು ಉತ್ತರ ಹೇಳಬಹುದು ಅಭ್ಯಂತರವಿಲ್ಲ. ಆದರೆ ನಾವು 4–5 ಜನ ನಿಲುವಳಿ ಸೂಚನೆ ಕಳುಹಿದ್ದೆವು. ಇದು ಬಹಳ ಪ್ರಾಮುಖ್ಯವಾದ ವಿಷಯ.

ಅಧ್ಯಕ್ಷರು.—ಕಾಲ್ ಅಟೆನ್‌ಷನ್‌ಗೆ ಉತ್ತರ ಕೊಟ್ಟಮೇಲೆ ತಮಗೆ ಬೇಕಾದ ಪ್ರಶ್ನೆಯನ್ನು ಕೇಳಿ ಉತ್ತರ ಪಡೆಯಬಹುದು.

ಶ್ರೀ ಎಸ್. ಬಂಗಾರಪ್ಪ.—ರೂಲ್ಸ್ ಪ್ರಕಾರ ನಾವು 5–6 ಜನ ನಿಲುವಳಿ ಸೂಚನೆ ಕಳುಹಿಸಿಕೊಟ್ಟಿದ್ದೇವೆ. ಈಗ ನಾವು ಕಾಲ್ ಅಟೆನ್‌ಷನ್ ನೋಟೀಸ್ ಒಪ್ಪಿಕೊಂಡರೆ ಹೆಚ್ಚು ಪ್ರಶ್ನೆಯನ್ನು ಹಾಕಿ ಮಂತ್ರಿಗಳಿಂದ ಉತ್ತರವನ್ನು ಪಡೆಯುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಬಹುದು. ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ಇದೇ ವಿಷಯದ ಬಗ್ಗೆ ಬೇಕಾದರೆ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಹೇಳಬಹುದು. ಈಗ ತಾವು ಕಾಲ್ ಅಟೆನ್‌ಷನ್ ನೋಟೀಸ್ ಕೇಳದಿದ್ದರೆ ನಾನು ಮುಂದಕ್ಕೆ ಹೋಗುತ್ತೇನೆ.

ಶ್ರೀ ಎಸ್ ಬಂಗಾರಪ್ಪ.—ನಾವು ಸಾರ್ವಜನಿಕ ಹಿತದೃಷ್ಟಿಯಿಂದ ತಮಗೆ ನಿಲುವಳಿ ಸೂಚನೆಯನ್ನು ಕಳುಹಿಸಿ ಅದಕ್ಕೆ ತಮ್ಮ ಒಪ್ಪಿಗೆಯನ್ನು ಪಡೆದುಕೊಂಡು ಈ ಸದನದ ಕಾರ್ಯಕಲಾಪಗಳನ್ನು ಮುಂದೂಡಿ ಜರೂರಾದ ಸಾರ್ವಜನಿಕ ವಿಷಯವನ್ನು ನಾವು ಇಲ್ಲಿ ಚರ್ಚೆ ಮಾಡಬೇಕೆಂಬ ಉದ್ದೇಶದಿಂದ ನಾವು ಇದನ್ನು ತಮಗೆ ಕಳುಹಿಸಿದ್ದೇವೆ. ಇದು ಬಹಳ ಪ್ರಾಮುಖ್ಯವಾದ ವಿಷಯ.

ತಾವು ಈ ರೀತಿ ಮಾಡಿದರೆ ಹೇಗೆ ? ಇದನ್ನು ತಾವು ಸರ್ಕಾರಕ್ಕೆ ಕಳುಹಿಸದೆ ಹಾಗೆಯೇ ಇಟ್ಟು ಕೊಂಡಿದ್ದೀರಿ. ದಯವಾಡಿ ನಾವು ಕಳುಹಿಸಿದ ನಿಲುವಳಿ ಸೂಚನೆಯನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಅವಕಾಶವನ್ನು ಕೊಡಿ.

ಅಧ್ಯಕ್ಷರು.—ತಾವು ನನಗೆ ಕೊಟ್ಟಿರುವ ಅಧಿಕಾರದ ಪ್ರಕಾರ ನಾನು ತಾವು ಕಳುಹಿಸಿದ ನಿಲುವಳಿ ಸೂಚನೆಯನ್ನು ಕಾಲ್ ಅಟನ್‌ಷನ್ ನೋಟೀಸಾಗಿ ಪರಿವರ್ತನೆ ಮಾಡಿದ್ದೇನೆ. ಅದಕ್ಕೆ ಅದಕ್ಕೆ ಉತ್ತರ ಬಂದಿದೆ. ಈಗ ಕಾಲ್ ಅಟೆನ್‌ಷನ್ ನೋಟೀಸಿಗೆ ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ. ಅದರಲ್ಲಿ ತಮಗೆ ಸಮಾಧಾನ ಆಗದಿದ್ದರೆ ಮುಂದೆ ನೋಡೋಣ.

Sri H. D. DEVEGOWDA.—Let the Government make its own statement. It is left to the treasury bench. We are not bothered about the procedural matter.

Sri S. BANGARAPPA.—If you are prepared to call attention of the Minister under rule 163 I have no objection. I have sent a separate adjournment motion.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರು ನಿಲುವಳಿ ಸೂಚನೆ ಕಳುಹಿಸಿಲಿಲ್ಲ ಎಂದು ನಾನು ಹೇಳಲಿಲ್ಲ. ಅವರು ಕಳುಹಿಸಿಕೊಟ್ಟಂತಹ ನಿಲುವಳಿ ಸೂಚನೆಯನ್ನು ಕಾಲ್ ಅಟೆನ್‌ಷನ್ ನೋಟೀಸಾಗಿ ಪರಿವರ್ತನೆ ಮಾಡಿದ್ದೇನೆ ಎಂದು ನಾನು ಹೇಳಿದ್ದೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಶಾಖೆಯ ಮಂತ್ರಿಗಳು.).—ಮಾನ್ಯ ಸದಸ್ಯರು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದರು. The speaker in her wisdom thought it fit to convert it into Call Attention Notice. Now after the Speaker exercises her discretion and converted it into a Call Attention Notice and put it on the Agenda, I feel that it would not be fair to question the authority of the Speaker and raise the issue over and over again.

ಶ್ರೀ ಎಚ್. ಡಿ. ದೇವೇಗೌಡ.—ಆ ರೀತಿ ಹೇಳುವುದನ್ನು ಒಪ್ಪುವುದಕ್ಕೆ ನಾವು ತಯಾರಿಲ್ಲ. ಅಧ್ಯಕ್ಷರು ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ ಈಗ ಕಳುಹಿಸಿದ್ದನ್ನು ಕಾಲ್ ಅಟೆನ್‌ಷನ್ ಆಗಿ ಪರಿವರ್ತನೆ ಮಾಡಿದ್ದೇನೆ. ಅದನ್ನು ಮತ್ತೆ ನಿಲುವಳಿ ಸೂಚನೆಯಾಗಿ ತೆಗೆದುಕೊಳ್ಳುವುದನ್ನು ಯೋಚನೆ ಮಾಡೋಣ. ಈಗ ಕಾಲ್ ಅಟೆನ್‌ಷನ್ ನೋಟೀಸಿಗೆ ಉತ್ತರ ಹೇಳಲಿ ಎಂದು ಹೇಳಿದ್ದಾರೆ. ನಮ್ಮ ಅಭಿಪ್ರಾಯವನ್ನು ಈ ಸಭೆಯಲ್ಲಿ ಹೇಳುವುದಕ್ಕೆ ಅವಕಾಶವನ್ನು ಕೊಡದೆ ನಿಲುವಳಿ ಸೂಚನೆಯನ್ನು ಕಾಲ್ ಅಟೆನ್‌ಷನ್ ನೋಟೀಸಾಗಿ ಪರಿವರ್ತನೆ ಮಾಡುವುದನ್ನು ನಾವು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ನಾವು ನಿಲುವಳಿ ಸೂಚನೆ ಕಳುಹಿಸಿ ಸಮಸ್ಯೆಯ ತೀವ್ರತೆಯ ಬಗ್ಗೆ ಈ ಸಭೆಯ ಗಮನಕ್ಕೆ ತರುವುದಕ್ಕೆ ಅವಕಾಶ ಇಲ್ಲದಂತೆ ತಾವು ನಿರ್ಣಯ ತೆಗೆದುಕೊಂಡಿದ್ದೀರಿ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಹೇಳಲಿ. ಅದರಿಂದ ಸಮಾಧಾನ ಆಗದಿದ್ದರೆ ಆ ಮೇಲೆ ನೋಡೋಣ.

Sri H.M. CHANNABASAPPA.—I would like to submit the members are enxious to know the position and after the Minister replies, if they still feel that the meterial furnished would not satisfy and if you want to persist on the adjournment motion, it would be a different matter. If you do not call the attention as directed by the Speaker, it only shows that you are not anxious to know the facts. Aftar knowing the facts you can take any deeision you want.